ವಿಕಸನಕೊಂಡಿರುವುದರಿಂದ, ಹಿಂದುಳಿದ ಮತ್ತು ವಿಕಾಸಶೀಲ ದೇಶಗಳೂ ತಮ್ಮ ಪ್ರಗತಿಗಾಗಿ ತಕ್ಕಮಟ್ಟಿಗೆ ಪರಿಸರನಾಶವನ್ನು ಮಾಡುವ ಅಧಿಕಾರವಿರಬೇಕೆಂಬ ವಾದದಲ್ಲಿನ ಪೊಳ್ಳನ್ನು ಅಮಿತಾವ್ ಎತ್ತಿಹಿಡಿಯುತ್ತಾರೆ.

ಸೈನ್ಯದ ಮಾತಿಗೆ ಬಂದಾಗ– ಯುದ್ಧ ಅಥವಾ ಅದರ ನಿರೀಕ್ಷೆಯೇ ಉದ್ದೇಶವಿರುವ– ಆಕ್ರಮಣ ಮತ್ತು ನಾಶವೇ ಮೂಲಮಂತ್ರವಾದ ಈ ಪಡೆಯ ವಿಸ್ತಾರಕ್ಕೆ ಅನೇಕ ರೀತಿಯ ಸಮರ್ಥನೆಯನ್ನು ದೇಶಭಕ್ತಿಯ ಭಾಷೆಯಲ್ಲಿ ಕೊಡುತ್ತಾ, ಪೃಥ್ವಿಯ ಸಮತೋಲನಕ್ಕೆ ಧಕ್ಕೆಯುಂಟು ಮಾಡುತ್ತೇವೆ. ಯದ್ಧವಿಲ್ಲದೇ ಶಾಂತಿಯ ಸಮಯದಲ್ಲೂ ಸೈನ್ಯದ ಪಾತ್ರ ಮತ್ತು ಪ್ರವರ್ತನೆಯನ್ನು ನೋಡಬೇಕು. ಉದಾಹರಣೆಗೆ, ಭೂಕಂಪ–ನೆರೆಯಂತಹ ಆಪತ್ತು ಉಂಟಾದಾಗ ಮೊದಲು ಸಹಾಯಕ್ಕೆ ಎದ್ದು ನಿಲ್ಲುತ್ತಿದ್ದುದು ಸುತ್ತಮುತ್ತಲಿನ ಸಮಾಜ ಮತ್ತು ಸಮುದಾಯ. ಆದರೆ ಈಚೀಚೆಗೆ, ಇಂಥ ಸಂದರ್ಭಗಳಲ್ಲಿ ಸೈನ್ಯವನ್ನು ತಕ್ಷಣಕ್ಕೆ ಕರೆಯುವುದನ್ನು ನೋಡುತ್ತಿದ್ದೇವೆ. ಸೈನ್ಯದ ಮಾನವೀಯ ಮುಖ ತೋರಿಸುತ್ತಾ ಅದರ ಅಸ್ತಿತ್ವ ಮತ್ತು ಬೆಳವಣಿಗೆಗೆ ಒಂದು ಜಸ್ಟಿಫಿಕೇಶನ್ ಕೊಡುವುದು ಒಂದು ಹಂತದಲ್ಲಾದರೆ, ಮತ್ತೊಂದು ಹಂತದಲ್ಲಿ ಕೇವಲ ಸಮುದಾಯಕ್ಕೆ ಮೀಸಲಾಗಿದ್ದ ಜಾಗಗಳನ್ನೂ ಈ ಶಕ್ತಿ ಆಕ್ರಮಿಸಿಕೊಳ್ಳುತ್ತಿರುವುದನ್ನು ಕಾಣಬಹುದು.

ಈ ಎಲ್ಲವೂ ಸಾಗುತ್ತಿರುವ ದಿಕ್ಕಿಗೆ ಬೆಳವಣಿಗೆಯ ಪರಿಭಾಷೆಯೇ ಕಾರಣ. ಬೆಳವಣಿಗೆ ಎನ್ನುವುದನ್ನು ಮಾರುಕಟ್ಟೆಯ ಮಾಪನದಲ್ಲಿ ದುಡ್ಡಿನ ಮೂಲಕ ಲೆಕ್ಕಕಟ್ಟುತ್ತಾ ಮುಂದುವರೆಯುವುದರಿಂದ, ನಾವು ಮಾನವಕೇಂದ್ರಿತ ನೀತಿಗಳಿಂದ ದೂರ, ಹೂಡಿಕೆ ಕೇಂದ್ರಿತ ನೀತಿ ಮತ್ತು ತಾಂತ್ರಿಕತೆಯತ್ತ ಸಾಗುತ್ತಿದ್ದೇವೆ. ಇದನ್ನು ನಿರೂಪಿಸಲು ಅಮಿತಾವ್ ಒಂದು ಆಸಕ್ತಿಕರ ಉದಾಹರಣೆಯನ್ನು ಕೊಡುತ್ತಾರೆ. ಮೊದಲಿಗೆ, ಶಕ್ತಿ ಎನ್ನುವ ಪದವನ್ನು ನಿರಚಿಸಿ ನೋಡುತ್ತಾರೆ. ವಿದ್ಯುತ್ ಶಕ್ತಿ ಎನ್ನುವುದರಲ್ಲಿ ವಿದ್ಯುತ್ತಿನಿಂದ ಉಂಟಾಗುವ ಶಕ್ತಿಯಲ್ಲದೇ, ಅಧಿಕಾರದಿಂದಲೂ ದಕ್ಕುವ ಶಕ್ತಿ ಮತ್ತು ಈ ಎರಡೂ ಶಕ್ತಿಗಳು ಹೂಡಿಕೆಯಲ್ಲಿ ಕೇಂದ್ರಿತವಾಗಿರುವ ಒಳನೋಟ ಈ ಬರವಣಿಗೆಯಿಂದ ನಮಗೆ ಸಿಗುತ್ತದೆ. ಶಕ್ತಿಯ ಉತ್ಪಾದನೆ ಯಾವ ಸಂಪನ್ಮೂಲದಿಂದ ಆಗುತ್ತಿದೆ ಎನ್ನುವ ಪ್ರಶ್ನೆಯನ್ನು ಹಿಡಿದು ಹೊರಟರೆ, ಥರ್ಮಲ್ ಪ್ಲಾಂಟುಗಳಲ್ಲಿ ಉಪಯೋಗಿಸುವ ಇದ್ದಿಲ ಗಣಿಗಳಿಂದ ಶಕ್ತಿಯ ಉತ್ಪಾದನೆ ಕ್ರಮಕ್ರಮೇಣ ತೈಲ ಶಕ್ತಿಯತ್ತ ವಾಲುತ್ತಿರುವುದನ್ನು ಗಮನಿಸಿ. ಗಣಿಗಾರಿಕೆಯಲ್ಲಿ ಕೆಲಸಗಾರರ ಪ್ರಾಧಾನ್ಯತೆಯಿದೆ. ಆದರೆ, ತೈಲವನ್ನು ತೆಗೆಯಲು ಗಣಿಗಾರಿಕೆಯಷ್ಟು ಹೆಚ್ಚಿನ ಪ್ರಮಾಣದಲ್ಲಿ ಮಾನವ ಸಂಪನ್ಮೂಲಗಳ ಅವಶ್ಯಕತೆಯಿಲ್ಲ. ಜನರಿಂದ ದೂರವಾಗಿ ದುಡ್ಡಿನ–ಹೂಡಿಕೆಯ ಕಡೆಗೆ ನಮ್ಮ ಗಮನವು ಕೇಂದ್ರೀಕೃತವಾದ ತಕ್ಷಣಕ್ಕೆ, ನಮಗೆ ಜಾಗತೀಕರಣದ ಪ್ರಭಾವ ಅರಿವಿಗೆ ಬರುತ್ತದೆ. ಮಾನವಸಂಪನ್ಮೂಲಗಳು ಸಿಗುವುದು ನಿರ್ದಿಷ್ಟ ಭೂಗೋಳಗಳಲ್ಲಿ. ಆದರೆ, ಧನಸಂಪತ್ತು ಎಲ್ಲ ಅಂತರರಾಷ್ಟ್ರೀಯ ಸರಹದ್ದುಗಳನ್ನೂ ಮೀರಿ ಭ್ರಮಣ ಮಾಡಬಹುದು. ಎರಡೂ ಪರಿಸರನಾಶದ ಮೂಲವೇ ಆದರೂ, ತೈಲವನ್ನು ತೆಗೆಯುವುದರಲ್ಲಿ ಒಂದು ವಿಶೇಷ ದಕ್ಷತೆಯಿದೆ.

ನಾವು ಎಲ್ಲವನ್ನೂ ನಮ್ಮದಾಗಿಸಿಕೊಳ್ಳಬೇಕೆನ್ನುವ ಸ್ವಾರ್ಥ, ಆ ಸ್ವಾರ್ಥದಿಂದ ಉಂಟಾಗಬಹುದಾದ ಹಿಂಸೆ, ಕೇವಲ ಪರಿಸರದ ಮೇಲಿನ ಆಕ್ರಮಣಕ್ಕೇ ಸೀಮಿತವಾಗುವುದಿಲ್ಲ. ಬದಲಿಗೆ ಭೂಗೋಳಗಳನ್ನು ಗೆಲ್ಲುವ, ಅಲ್ಲಿರುವ ಸ್ಥಳೀಯ ಜನತೆಯ ಮೇಲೆ ದಬ್ಬಾಳಿಕೆ ನಡೆಸುವ, ಅವರುಗಳನ್ನು ಊಳಿಗಕ್ಕೆ ಹಾಕುವ ಪ್ರಕ್ರಿಯೆಯನ್ನು ಚರ್ಚಿಸುತ್ತಾರೆ. ನೈಸರ್ಗಿಕ, ದೈವದತ್ತ ಸಂಪನ್ಮೂಲಗಳಿದ್ದರೆ ಏನೂ ಪ್ರಯೋಜನವಿಲ್ಲ. ಆ ಸಂಪನ್ಮೂಲಗಳನ್ನು ವಿನಿಮಯ ಮಾಡಿ ದುಡ್ಡು ಮಾಡಿಕೊಳ್ಳುವ ತಾಕತ್ತಿರಬೇಕು. ಆ ತಾಕತ್ತಿರುವುದು ಧನವಂತ ದೇಶಗಳಿಗೆ. ಜಾಯಿಕಾಯಿ ಮತ್ತು ಜಾಪತ್ರೆಯಿದ್ದ ಬಂಡಾ ದ್ವೀಪಗಳ ನರಸಂಹಾರವನ್ನು ತಪ್ಪಿಸಿ ಉಳಿದ ಜನ ಬಡತನದಲ್ಲೇ ಮುಂದುವರೆದರು. ಆದರೆ ಜಾಯಿಕಾಯಿ–ಜಾಪತ್ರೆಗಳನ್ನು ಬಂಡಾ ದ್ವೀಪಗಳಲ್ಲಿ ಕೊಂಡು, ಪಾಶ್ಚಾತ್ಯ ಮಾರುಕಟ್ಟೆಗಳಲ್ಲಿ ಮಾರಿಕೊಂಡ ವರ್ತಕರು, ಕೊಂಡ ಬೆಲೆಗೆ ನಾಲ್ಕುನೂರು ಪಟ್ಟು ಬೆಲೆ ಕಟ್ಟಿ ಮಾರಾಟ ಮಾಡಿ ಶ್ರೀಮಂತರಾದರು. ಅಮೆರಿಕಕ್ಕೆ ವಲಸೆ ಹೋಗಿ ಅಲ್ಲಿನ ಸ್ಥಳೀಯರ ಮೇಲೆ ದಬ್ಬಾಳಿಕೆ ಮಾಡಿದವರ ಕಥೆಯೂ ಅದೇನೇ.